'ನೀನು ನನ್ನೊಡನೆ ಕೂಡ ಮುಕ್ತವಾಗಿ, ಸ್ನೇಹದಿಂದ ನಡೆದುಕೊಳ್ಳುವದಿಲ್ಲ. ನಮ್ಮಲ್ಲಿ ಗಂಡ–ಹೆಂಡತಿಯರ ಮಧುರ ಬಾಂಧವ್ಯವೇ ಇಲ್ಲ.'

ಅವರು ಹೇಳಿದ್ದು ಸತ್ಯವೇ ಆಗಿತ್ತು. ಅವರ ಮಾತನ್ನು ಕೇಳಿ ನಾನು ನನ್ನ ನಡತೆಗಾಗಿ ತಲೆ ತಗ್ಗಿಸಬೇಕಾಗಿತ್ತು. ಆದರೆ ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳದೇ ಅವರ ಮೇಲೆಯೇ ರೇಗಾಡಿಬಿಟ್ಟೆ. 'ನಿಮಗೆ ನನ್ನದೇ ತಪ್ಪೆನಿಸುತ್ತಿದ್ದರೆ ನನ್ನನ್ನು ನನ್ನ ಅಮ್ಮನ ಮನೆಗೆ ಕಳಿಸಿಬಿಡಿ, ನನಗೂ ನಿಮ್ಮೆಲ್ಲರ ಅವಹೇಳನ ಸಹಿಸಿ ಸಾಕಾಗಿಹೋಗಿದೆ' ಎಂದೆ. ಅವರು ಏನೂ ಹೇಳಲಿಲ್ಲ. 'ಅವಳ ತಾಯಿಗೆ ಹುಷಾರಿಲ್ಲ, ಅವರನ್ನು ನೋಡಲು ಹೋಗುತ್ತಿದ್ದಾಳೆ' ಎಂದು ನೆಪ ಹೇಳಿ ಮರುದಿನವೇ ನನ್ನನ್ನು ಟ್ರೇನ್ ಹತ್ತಿಸಿ ಕಳಿಸಿಬಿಟ್ಟರು. ವಾಪಸ್ ಬರುವ ವಿಚಾರವಾಗಿ ಅವರೂ ಏನನ್ನು ಕೇಳಲಿಲ್ಲ, ನಾನೂ ಹೇಳಲಿಲ್ಲ. ನಾನು ಸುರಕ್ಷಿತವಾಗಿ ತಲುಪಿದೆನೆಂದು ವಿವೇಕನೇ ಅವರಿಗೆ ಫೋನ್ ಮಾಡಿದ. ನಂತರ ಅಲ್ಲಿಂದ ಯಾವ ಸಮಾಚಾರವೂ ಇಲ್ಲ.

ಬರುವಾಗ ತುಂಬ ಜಂಭದಿಂದಿದ್ದೆ. ನಾನಿಲ್ಲದೇ ಅಲ್ಲಿ ನಡೆಯುವುದೇ ಇಲ್ಲ. ಸೀಮಾಳ ಸವಿ ಮಾತು, ಅತ್ತೆಯ ಭಾಷಣದಿಂದೇನೂ ಆಗುವುದಿಲ್ಲ. ನನ್ನನ್ನು ಬೇಗ ವಾಪಸ್ ಕರೆಸಿಕೊಳ್ಳುತ್ತಾರೆ ಎಂದುಕೊಂಡಿದ್ದೆ. ಆದರೆ ಆಮೇಲೆ ಭಯವಾಗತೊಡಗಿತು. ನಾನಿಲ್ಲದೆಯೂ ಅವರು ಚೆನ್ನಾಗಿಯೇ ಇದ್ದಾರೆ. ನನ್ನ ಮಕ್ಕಳು ಪ್ರತಿಭಾ–ಪ್ರತೀಕ ಕೂಡ ನನ್ನನ್ನು ಮರೆತುಬಿಟ್ಟರೇ!... ಯಾರ ಬಗ್ಗೆ ತುಂಬ ಅಭಿಮಾನ ಇಟ್ಟುಕೊಂಡು ಬಂದಿದ್ದೆನೋ ಆ ಅಮ್ಮ ಕೂಡ ಕಾರಣವಿಲ್ಲದೇ ಹೆಣ್ಣುಮಕ್ಕಳು ತವರಿಗೆ ಬಂದರೆ ಮರ್ಯಾದೆ ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಹೆಣ್ಣೆಂದರೆ ಇಷ್ಟೇನೇ, ಅವಳಿಗೆ ಸ್ವಂತಿಕೆ ಎನ್ನುವುದೇ ಇಲ್ಲವೇ, ಎಲ್ಲರೊಡನೇ ಹೊಂದಿಕೊಂಡು ಹೋಗವುದೇ ಅವಳ ಜೀವನವೇ – ಯೋಚಿಸಿ ಯೋಚಿಸಿ ಮನಸ್ಸು ಭಾರವಾಯಿತು. ಏನು ಮಾಡಬೇಕೆಂದು ತೋಚಲಿಲ್ಲ. ಸೀರೆ ಬದಲಾಯಿಸಿ, ಪರ್ಸ್ ತೆಗೆದುಕೊಂಡು ಮಾರ್ಕೆಟ್ಟಿನಲ್ಲಿ ಆಚೆ–ಈಚೆ ಸುಮ್ಮನೆ ಸುತ್ತಾಡಿದೆ. ನಂತರ ಏನೋ ಯೋಚಿಸಿ ಹಣ್ಣು, ಸ್ವೀಟ್ ತೆಗೆದುಕೊಂಡು ರಿಕ್ಷಾ ಹಿಡಿದು ವಿಭಾಳ ಮನೆಗೆ ಹೊರಟೆ. ಅವಳ ಮನೆ ಇರುವುದು ಊರಿನ ಇನ್ನೊಂದು ತುದಿಗೆ. ರಿಕ್ಷಾ ಬಾಡಿಗೆ ಎಪ್ಪತ್ತೈದು ರೂಪಾಯಿ ಕೊಡುವಾಗ ಅಬ್ಬಾ ಎನಿಸಿತು.

ವಿಭಾಳ ಅತ್ತೆ ವರಾಂಡದಲ್ಲೇ ಕುಳಿತುಕೊಂಡು ಸ್ವೆಟರ್ ಹೆಣೆಯುತ್ತಿದ್ದರು. 'ನಮಸ್ಕಾರ ಅತ್ತೆ' ಎಂದೆ. ಅವರು ನನ್ನನ್ನು ನೋಡಿ ಆಶ್ಚರ್ಯದಿಂದ, 'ಓ, ಪ್ರಭಾ! ಬಾರಮ್ಮ, ನೀನು ಬಂದ ವಿಷಯ ವಿಭಾ ಹೇಳಿದ್ದಳು. ನೀನು ಇಷ್ಟರಲ್ಲೇ ವಾಪಸ್ ಹೊರಟು ಹೋಗಿರುವೆ ಎಂದುಕೊಂಡಿದ್ದೆ.'

'ನಿಮ್ಮನ್ನು ನೋಡದೇ ಹೇಗೆ ಹೋಗುತ್ತೇನೆ ಅತ್ತೆ.' ಬಾಯಲ್ಲಿ ನಮ್ರವಾಗಿ ಹೇಳಿದೆನಾದರೂ ಎಷ್ಟು ಸಿಟ್ಟು ಬಂತೆಂದರೆ – 'ನಾನು ನನ್ನ ತಮ್ಮನ ಮನೆಗೆ ಬಂದಿದ್ದೇನೆ; ನಾನಿನ್ನೂ ಇಲ್ಲಿಯೇ ಇದ್ದರೆ ನಿಮಗೇನು ನಷ್ಟ?' ಎಂದು ಕೇಳಬೇಕೆನಿಸಿತು.

'ವಿಭಾ ಬರುವುದು ಇನ್ನೂ ತಡವಾಗುವುದೇ?'

'ಆರು ಗಂಟೆಗೆ ಇಬ್ಬರೂ ಒಟ್ಟಿಗೇ ಬರುತ್ತಾರೆ.'

'ಪ್ರಸಾದ ಎಲ್ಲಿ? ಕಾಣುವುದಿಲ್ಲ?'

'ಅವನು ಟ್ಯೂಶನ್ನಿಗೆ ಹೋಗಿದ್ದಾನೆ. ಅವನು ಬರುವುದೂ ಏಳು ಗಂಟೆಗೆ. ಒಳಗೆ ಹೋಗೋಣವಾ ಇಲ್ಲವೇ ಇಲ್ಲಿಯೇ ಕುಳಿತುಕೊಳ್ಳೋಣವಾ?' ನಾನು ಒಳಗಿನಿಂದ ಒಂದು ಕುರ್ಚಿ ತೆಗೆದುಕೊಂಡು ಬಂದು ಅವರೆದುರಿಗೆ ಹಾಕಿಕೊಂಡು ಅವರು ಸ್ವೆಟರ್ ಹೆಣೆಯುವುದನ್ನು ನೋಡುತ್ತ ಕುಳಿತುಕೊಂಡೆ. ಸ್ವಲ್ಪ ಹೊತ್ತಿಗೇ ಗೇಟಿನ ಹತ್ತಿರ ಸ್ಕೂಟರ್ ಶಬ್ದವಾಯಿತು. ವಿಭಾ–